

بِسۡمِ اللّٰہِ الرَّحۡمٰنِ الرَّحِیۡمِ

# ಯಥಾರ್ಥ ಅಹ್ಮದಿಯರ ಗುಣಲಕ್ಷಣಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಅಮೆರಿಕದ ಹ್ಯೂಸ್ಟನ್‌ನ **'ಬೈತುಲ್ ಸಮೀಅ್'** ಮಸೀದಿಯಲ್ಲಿ 26–10–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನು ತನ್ನ ಅನುಗ್ರಹದಿಂದ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವಂತೆ ಮಾಡಿ ನಮಗೆ ಬಹಳ ದೊಡ್ಡ ಔದಾರ್ಯ ದಯಪಾಲಿಸಿದ್ದಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮಸೀಹ್ ಮೌಊದ್ ಅಲೈಹಿಸಲಾಮರನ್ನು ನಮ್ಮ ಮಹ್‌ದೀ ಎಂದು ಕರೆದಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮ ಮಹ್‌ದೀ ಎಂದು ಹೇಳಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಹ್‌ದೀ ಮಅ್‌ಹೂದ್ ಅಲೈಸ್ಸಲಾಮರ ಬಗ್ಗೆ ತನ್ನ ಪ್ರೀತಿ ಮತ್ತು ಸಾಮೀಪ್ಯದ ಪ್ರಕಟಣೆ ಉನ್ನತವಾದ ರೀತಿಯಲ್ಲಿ ಮಾಡಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನನ್ನು ನಂಬುವವರೊಂದಿಗೆ ಬೈಅತ್‌ಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಈಡೇರಿಸಿ ನೈಜ ವಿಶ್ವಾಸಿಗಳಾಗುವ ಬಗ್ಗೆ ನೋವುಭರಿತರಾಗಿ ಮಾರ್ಗದರ್ಶನ ನೀಡಿದ್ದಾರೆ. ಆ ಮಾರ್ಗದರ್ಶನಗಳನ್ನು ನಾವು ಯಾವಾಗಲೂ ನಮ್ಮ ಮುಂದೆ ಇರಿಸಬೇಕಾಗಿದೆ. ಹೀಗೆ ಮಾಡುವುದೇ ನಮ್ಮ ಆಧ್ಯಾತ್ಮಿಕ ತರಬೇತಿಯ ಮಾರ್ಗವಾಗಿದೆ. ನಾವು ಈ ಮಾರ್ಗದ ಮೂಲಕವೇ ಧರ್ಮದ ಬಗ್ಗೆ ವಾಸ್ತವಿಕ ಜ್ಞಾನ ಗಳಿಸುವೆವು. ನಾವು ಈ ಮಾರ್ಗದ ಮೂಲಕವೇ ಅಲ್ಲಾಹನ ಸಾಮೀಪ್ಯ ಗಳಿಸುವ ಮಾರ್ಗವನ್ನು ಅನ್ವೇಷಿಸಬಲ್ಲೆವು. ನಾವು ಈ ಮಾರ್ಗವನ್ನು ಅವಲಂಬಿಸಿಯೇ ಪವಿತ್ರ ಖುರ್‌ಆನಿನ ಸೂಕ್ಷ್ಮಜ್ಞಾನ ಗಳಿಸಬಲ್ಲೆವು. ಈ ಮಾರ್ಗದ ಮೂಲಕವೇ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಹತ್ವಪೂರ್ಣ ಸ್ಥಾನವನ್ನು ನಾವು ಅರಿತುಕೊಳ್ಳ ಬಲ್ಲೆವು. ಈ ಮಾರ್ಗದ ಮೂಲಕವೇ ನಾವು ನಮ್ಮ ವಿಶ್ವಾಸದ ಸ್ಥಿತಿಯನ್ನು ಉತ್ತಮಗೊಳಿಸ ಬಲ್ಲೆವು. ಈ ಮಾರ್ಗದ ಮೂಲಕವೇ ನಾವು ನಮ್ಮ ಅನುಷ್ಠಾನ ಕರ್ಮಗಳನ್ನು ಉತ್ತಮ ಪಡಿಸಬಲ್ಲೆವು. ನಾವು ಜ್ಞಾನದ ಈ ಖಜಾನೆಯನ್ನು ಹೊಂದಿದ್ದರೂ ನಾವು ಅದರಿಂದ ಲಾಭ ಪಡೆಯುವುದಿಲ್ಲವಾದರೆ ಅದು ನಮ್ಮ ದೌರ್ಭಾಗ್ಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನುಡಿಗಳಲ್ಲಿ ಶಕ್ತಿ, ಪರಿಶುದ್ಧತೆ ಮತ್ತು ಪ್ರಭಾವ ಇರುವಂತೆ ಬೇರೆ ಯಾವುದೇ ನುಡಿಯಲ್ಲಿ ಇರಲು ಸಾಧ್ಯವಿಲ್ಲ. ಏಕೆ ಸಾಧ್ಯವಿಲ್ಲವೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವ ಸೇವಕನನ್ನಾಗಿ ಮಾಡಿ ಇಸ್ಲಾಮಿನ ಪುನರುತ್ಥಾನಕ್ಕೋಸ್ಕರ ಮತ್ತು ಅಲ್ಲಾಹನ ಸಾಮೀಪ್ಯ ಗಳಿಸಲಿಕ್ಕೋಸ್ಕರ ಈ ಕಾಲಘಟ್ಟದಲ್ಲಿ ಕಳುಹಿಸಿರುವನು. ಆದುದರಿಂದ ಅವರ ನುಡಿಗಳನ್ನು ಓದುವುದು, ಆಲಿಸುವುದು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುವುದು ನಮಗೆ ಕಡ್ಡಾಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳ ಪ್ರಕಾಶದಲ್ಲಿ ಪ್ರತಿಯೊಬ್ಬನು ತನ್ನನ್ನು ಪರಿಶೋಧಿಸಬಹುದಾಗಿದೆ. ನಾವು ಎಲ್ಲಿ ನಿಂತಿದ್ದೇವೆ ನಾವು ಎಲ್ಲಿ ನಿಂತಿರಬೇಕಾಗಿದೆ ಎಂದು ನೋಡಬಹುದಾಗಿದೆ. ತಖ್ವ ಎಂದರೇನು, ತಖ್ವದ ಮಟ್ಟ ಹೇಗಿರಬೇಕು. ಒಳಿತೆಂದರೇನು, ಒಳಿತಿನ ಮಟ್ಟ ಹೇಗಿರಬೇಕು, ನಮ್ಮ ಹೊಣೆಗಾರಿಕೆಗಳು ಯಾವುದೆಲ್ಲಾ ಎಂದೆಲ್ಲಾ ಪರಿಶೋಧಿಸಬಹುದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ಸತ್ಯವಾದ ತಖ್ವದಿಂದ ಅಲ್ಲಾಹನು ಸಂಪ್ರೀತನಾಗುತ್ತಾನೆ. ಅದನ್ನು ಗಳಿಸುವ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಪದೇ ಪದೇ ಹೇಳಿದ್ದಾನೆ: **ಯಾ ಅಯ್ಯುಹಲ್ಲದೀನ ಆಮನುತ್ತಖುಲ್ಲಾಹ** ಓ ಸತ್ಯವಿಶ್ವಾಸಿಗಳೇ, ತಖ್ವವನ್ನು ಅವಲಂಬಿಸಿರಿ ಎಂದು. ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: **ಇನ್ನಲ್ಲಾಹ ಮಅಲ್ಲದೀನತ್ತಖವ್ ವಲ್ಲದೀನ ಹುಮ್ ಮುಹ್‌ಸಿನೂನ್.** ತಖ್ವವನ್ನು ಅವಲಂಬಿಸುವವರಿಗೆ ಅಲ್ಲಾಹನು ಬೆಬಂಲ ನೀಡುವವನೂ ಸಹಾಯ ನೀಡುವವನೂ ಆಗಿದ್ದಾನೆ.

ತಖ್ವ ಎಂದರೆ ಕೆಟ್ಟ ಕೆಲಸ ಮಾಡುವುದರಿಂದ ದೂರ ಸರಿಯುವುದಾಗಿದೆ. ಮುಹ್‌ಸಿನೂನ್ ಎಂದರೆ ಅವರು ಕೆಟ್ಟ ಕೆಲಸಗಳನ್ನು ಮಾಡುವವರಾಗಿರುವುದಿಲ್ಲ ಮಾತ್ರವಲ್ಲ ಒಳಿತುಗಳನ್ನು ಮಾಡುವವರಾಗಿರುತ್ತಾರೆ. ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: **ಅಲ್ಲದೀನ ಅಹ್‌ಸನುಲ್ ಹುಸ್‌ನಾ.** ಅವರು ಒಳಿತುಗಳನ್ನು ಮಾಡುತ್ತಾ ಇರುತ್ತಾರೆ. ನನಗೆ ಪದೇ ಪದೇ ಹೀಗೆ ಸಂದೇಶವಾಣಿ ಅವತೀರ್ಣವಾಗಿದೆ: **ಇನ್ನಲ್ಲಾಹ ಮಅಲ್ಲದೀನತ್ತಖವ್ ವಲ್ಲದೀನ ಹುಮ್ ಮುಹ್‌ಸಿನೂನ್.** ನನಗೆ ಎಷ್ಟು ಸಲ ಈ ಸಂದೇಶವಾಣಿ ಅವತೀರ್ಣವಾಗಿದೆ ಎಂದರೆ ನಾನು ಅದನ್ನು ಎಣಿಸಲಾರೆ. ಪ್ರಾಯಶಃ ಎರಡು ಸಾವಿರ ಸಲ ನನಗೆ ಈ ಇಲ್‌ಹಾಮ್ ಅವತೀರ್ಣಗೊಂಡಿರಬಹುದು. ಇದರ ಉದ್ದೇಶವೇನೆಂದರೆ ಈ ಜಮಾಅತಿಗೆ ಸೇರಿದವರು ನಾವು ಜಮಾಅತಿಗೆ ಸೇರಿದ್ದೇವೆ ಎಂಬ ಕಾರಣದಿಂದ ಮಾತ್ರ ಸಂತೋಷಪಡುವವರಾಗಬಾರದು. ಸತ್ಯವಾದ ತಖ್ವ ಮತ್ತು ಅದರೊಂದಿಗೆ ಒಳಿತುಗಳ ಅನುಷ್ಠಾನದಿಂದ ಮಾತ್ರ ಅಲ್ಲಾಹನ ಸಹಾಯ ಲಭಿಸುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಲವು ಪಾಪಗಳು ಸ್ಥೂಲವಾಗಿರುತ್ತವೆ. ಉದಾಹರಣೆಗೆ ಸುಳ್ಳು ಹೇಳುವುದು, ವ್ಯಭಿಚಾರ ಮಾಡುವುದು, ವಿಶ್ವಾಸ ವಂಚನೆ ಮಾಡುವುದು, ಸುಳ್ಳು ಸಾಕ್ಷ್ಯ ಹೇಳುವುದು, ಹಕ್ಕುಗಳ ಅಪಹಾರ, ಶಿರ್ಕ್ ಮೊದಲಾದುವುಗಳು. ಕೆಲವು ಪಾಪಕೃತ್ಯಗಳು

ಸೂಕ್ಷ್ಮವಾಗಿರುತ್ತವೆ. ಮನುಷ್ಯನು ಆ ಪಾಪ ಕೃತ್ಯ ಮಾಡುತ್ತಿದ್ದರೂ ಅವನಿಗೆ ಅದರ ಬಗ್ಗೆ ಅರಿವೇ ಇರುವುದಿಲ್ಲ. ಇಂತಹ ಪಾಪ ಕೃತ್ಯ ಮಾಡುತ್ತಾ ಇದ್ದು ವೃದ್ಧರಾದರೂ ಅವರಿಗೆ ಅದು ಪಾಪ ಕೃತ್ಯ ಎಂದು ತಿಳಿಯುವುದೇ ಇಲ್ಲ. ಉದಾಹರಣೆಗೆ ಪರದೂಷಣೆ ಬಹಳ ಚಿಕ್ಕ ವಿಷಯ ಎಂದು ಭಾವಿಸುತ್ತಾರೆ. ಆದರೆ ಪವಿತ್ರ ಖುರ್‌ಆನ್ ಅದರ ಬಗ್ಗೆ ಹೇಳಿರುವುದು, **ಅಯುಹಿಬ್ಬು ಅಹದುಕುಮ್ ಅನ್ ಯುಅ್‌ಕುಲ ಲಹ್‌ಮ ಅಖೀಹಿ ಮಯ್‌ತನ್.** ನಿಮ್ಮ ಪೈಕಿ ಯಾರಾದರೂ ತನ್ನ ಮೃತ ಸಹೋದರನ ಮಾಂಸವನ್ನು ತಿನ್ನಲು ಇಚ್ಛಿಸುವನೇ? ಎಂದಾಗಿದೆ.

ಮನುಷ್ಯನು ತನ್ನ ಸಹೋದರನನ್ನು ಹೀನೈಸುವ ಮಾತುಗಳನ್ನು ಆಡುವುದರಿಂದ ಅಲ್ಲಾಹನು ಕೋಪಗೊಳ್ಳುತ್ತಾನೆ. ನೀವು ನಿಮ್ಮ ಮೃತ ಸಹೋದರನ ಮಾಂಸವನ್ನು ತಿನ್ನಲು ಬಯಸುವಿರೋ? ಎಂದು ಅಲ್ಲಾಹನು ಹೇಳುತ್ತಾನೆ. ಒಬ್ಬನು ತನ್ನ ಸಹೋದರನನ್ನು ಅಜ್ಞಾನಿ ಎಂದೂ ತಿಳಿಗೇಡಿ ಎಂದೂ ನಿಂದಿಸುವುದು ಕೆಟ್ಟ ಕೆಲಸವಾಗಿದೆ. ಇದೇ ರೀತಿ ಜಿಪುಣತನ ಮತ್ತು ಕೋಪ ಸಹ ಕೆಟ್ಟದಾಗಿವೆ. ಜಿಪುಣತನ ಮಾಡುವುದು ಸಿಟ್ಟು ಗೊಳ್ಳುವುದು ಕೆಟ್ಟ ಕೆಲಸಗಳಾಗಿವೆ. ಅಲ್ಲಾಹನು ಉಪದೇಶಿಸುವುದೇನೆಂದರೆ ಮೊದಲನೆಯದಾಗಿ ಇವುಗಳನ್ನು ತ್ಯಜಿಸಬೇಕು. ಪ್ರತಿಯೊಂದು ರೀತಿಯ ಪಾಪ ಕೃತ್ಯಗಳಿಂದ, ಅವು ಕಣ್ಣುಗಳಿಂದ ಮಾಡುವುದಾಗಿರಲಿ ಕಿವಿಗಳಿಂದಾಗಿರಲಿ ಕೈ ಕಾಲುಗಳಿಂದ ಮಾಡುವುದಾಗಿರಲಿ ಸತ್ಯವಿಶ್ವಾಸಿ ತನ್ನನ್ನು ಸಂರಕ್ಷಿಸಿಕೊಳ್ಳಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅನೇಕ ಕೆಡುಕುಗಳು ಕೇವಲ ಕೆಟ್ಟ ಸಂಶಯಗಳಿಂದ ತಲೆದೋರುತ್ತವೆ. ಒಬ್ಬನ ಬಗ್ಗೆ ಯಾವುದಾದರೂ ವಿಷಯವನ್ನು ಆಲಿಸಿದ ಕೂಡಲೇ ನಂಬುವುದು ಬಹಳ ಕೆಟ್ಟದಾಗಿದೆ. ಯಾವುದರ ಬಗ್ಗೆ ನಿಖರ ಸಮಾಚಾರ ದೊರೆತಿಲ್ಲವೋ ಮತ್ತು ದೃಢವಿಶ್ವಾಸವಿಲ್ಲವೋ ಅದನ್ನು ಹೃದಯದಲ್ಲಿರಿಸಬೇಡಿರಿ.

ಕೆಟ್ಟ ಸಂಶಯಗಳು ನಮ್ಮ ಸಮಾಜದಿಂದ ದೂರ ಸರಿಯುವುದಾದರೆ ನಮ್ಮ ಸಮಾಜದಿಂದ ಅರ್ಧಾಂಶ ಜಗಳ ಮತ್ತು ಕಲಹಗಳು ದೂರ ಸರಿಯುವುವು. ನಮ್ಮಲ್ಲಿ ಐಕ್ಯತೆ ಹುಟ್ಟುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅನ್ಯರ ಬಗ್ಗೆ ಒಳ್ಳೆಯ ಅಭಿಪ್ರಾಯ ಹೊಂದಿರಿ. ಯಾವುದಾದರೂ ವದಂತಿ ಲಭಿಸಿದರೆ ಅದರ ಬಗ್ಗೆ ಖಾತರಿ ಪಡಿಸಿಕೊಳ್ಳಿರಿ. ಮನುಷ್ಯನು ಬಲಹೀನನಾಗಿದ್ದಾನೆ. ಕೆಲವು ಕೆಟ್ಟ ಯೋಚನೆಗಳು ಹೃದಯದಲ್ಲಿ ಹುಟ್ಟಬಹುದಾಗಿದೆ. ಆದರೆ ಆ ಆಲೋಚನೆಗಳ ಪ್ರಕಾರ ಕಾರ್ಯನಿರತನಾಗದಿದ್ದರೆ ಅಲ್ಲಾಹನು ಕ್ಷಮಿಸುತ್ತಾನೆ. ಹೃದಯದಲ್ಲಿ ಅಪಾಯಕಾರಿ ಯೋಚನೆಗಳು ಜನಿಸಿದರೆ ಅವುಗಳ ಕಾರಣದಿಂದ ಅಲ್ಲಾಹನು ಹಿಡಿಗೂಡಲಾರನು. ಉದಾಹರಣೆಗೆ ಒಬ್ಬನು ಹೀಗೆ ಯೋಚಿಸುತ್ತಾನೆ. ಇಂತಿಂತಹವನ ಸಂಪತ್ತು ನನಗೆ ದೊರಕಿದರೆ ಉತ್ತಮವಾಗುವುದು. ಇದು ಒಂದು ತರಹದ ದುರಾಶೆಯಾಗಿದೆ. ಆದರೆ ಕೇವಲ ಈ ಯೋಚನೆ ಹೃದಯದಲ್ಲಿ ಜನಿಸಿದ ಕಾರಣದಿಂದ ಅಲ್ಲಾಹನು ಶಿಕ್ಷಿಸಲಾರನು. ಆದರೆ ಈ ಯೋಚನೆಯನ್ನು ಹೃದಯಲ್ಲಿ ಸ್ಥಾಪಿಸಿ ಯಾವುದಾದರೂ ಉಪಾಯದಿಂದ ಅನ್ಯನ ಸಂಪತ್ತನ್ನು ಅಪಹರಿಸಬೇಕೆಂದು ದೃಢನಿರ್ಧಾರ ಮಾಡುವುದಾದರೆ ಅಂತಹ ವ್ಯಕ್ತಿಯನ್ನು ಅಲ್ಲಾಹನು ಶಿಕ್ಷಿಸುವನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಅನೇಕ ಜನರು ಹೇಗಿರುವರೆಂದರೆ ಅವರು ಕೊಲೆ ಮಾಡಿರಲಾರರು, ಮನೆಗೆ ಕನ್ನ ಹಾಕಿರಲಾರರು. ಕದ್ದಿರಲಾರರು, ಡಕಾಯಿತಿ ಮಾಡಿರಲಾರರು, ಅಥವಾ ಬೇರೆ ರೀತಿ ದೊಡ್ಡ ಪಾಪ ಕೃತ್ಯ ಮಾಡಿರಲಾರರು, ಆದರೆ ಪರದೂಷಣೆ ಮಾಡದವರು, ಚಾಡಿ ಮಾತು ಹೇಳದವರು, ಬೆನ್ನ ಹಿಂದೆ ಕೆಟ್ಟ ಮಾತು ಹೇಳದವರು, ಕೆಟ್ಟ ಸಂಶಯ ಹೊಂದದವರು, ತನ್ನ ಸಹೋದರನನ್ನು ಹೀನೈಸಿ ಅವನಿಗೆ ದುಃಖವಾಗುವಂತೆ ಮಾಡದವರು, ಸುಳ್ಳು ಹೇಳಿ ತಪ್ಪು ಮಾಡದವರು, ಎಷ್ಟು ಜನರಿದ್ದಾರೆ? ನಾನು ದೃಢವಾಗಿ ಹೇಳುತ್ತೇನೆ ಯಾರಿಗಾದರೂ ನೋವಾಗುವಂತೆ ವರ್ತಿಸದವರು, ಯಾರ ಬಗ್ಗೆಯಾದರೂ ದೂರು ಹೇಳದವರು, ಕೆಟ್ಟ ಸಂಶಯ ಹೊಂದದವರು, ಸುಳ್ಳು ಹೇಳದವರು, ಕೆಟ್ಟ ಯೋಚನೆಗಳನ್ನು ಹೃದಯದಲ್ಲಿ ಹೊಂದದವರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಅಲ್ಲಾಹನು ಹೇಳುವುದೇನೆಂದರೆ ವಿಶ್ವಾಸದ ಪ್ರಥಮ ಹಂತ ಮನುಷ್ಯನು ತಖ್ವವನ್ನು ಹೊಂದುವುದಾಗಿದೆ. ಅಲ್ಲಾಹನು ಲೋಕದಲ್ಲಿ ಐಕ್ಯತೆಯನ್ನು ಹರಡಲು ಇಚ್ಛಿಸುತ್ತಾನೆ. ಆದರೆ ಯಾವ ವ್ಯಕ್ತಿ ತನ್ನ ಸಹೋದರನಿಗೆ ನೋವನ್ನು ಉಂಟುಮಾಡುತ್ತಾನೋ, ದೌರ್ಜನ್ಯ ಮಾಡುತ್ತಾನೋ ವಂಚನೆ ಮಾಡುತ್ತಾನೋ ಅವನು ಐಕ್ಯತೆಯ ಶತ್ರುವಾಗಿದ್ದಾನೆ. ಈ ಕೆಟ್ಟ ಯೋಚನೆಗಳನ್ನು ಹೃದಯದಿಂದ ದೂರ ಸರಿಸುವ ತನಕ ಸತ್ಯವಾದ ಐಕ್ಯತೆ ಎಂದೂ ಹಬ್ಬಲಾರದು. ನೀವು ಪವಿತ್ರ ಖುರ್‌ಆನನ್ನು ಪದೇ ಪದೇ ಓದುತ್ತಾ ಇರಿ. ನೀವು ಕೆಟ್ಟ ಕೆಲಸಗಳ ವಿವರಗಳನ್ನು ಬರೆಯಿರಿ. ಅನಂತರ ಅಲ್ಲಾಹನ ಅನುಗ್ರಹ ಬೇಡಿಕೊಂಡು ಈ ಕೆಟ್ಟ ಕೆಸಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿರಿ. ಇದು ತಖ್ವದ ಪ್ರಥಮ ಹಂತವಾಗಿದೆ. ನೀವು ಈ ರೀತಿ ಪ್ರಯತ್ನ ಮಾಡಿದರೆ ಅಲ್ಲಾಹನು ನಿಮಗೆ ಪಾಪದಿಂದ ರಕ್ಷಿಸುವ ಭಾಗ್ಯ ನೀಡುವನು. ಅವನು ನಿಮಗೆ ಆ ಕರ್ಪೂರದ ಶರಬತ್ತು ಕುಡಿಸುವನು. ಅದರಿಂದ ನಿಮ್ಮಲ್ಲಿ ಪಾಪ ಕೃತ್ಯ ಮಾಡುವ ಭಾವನೆಗಳು ಪರಿಪೂರ್ಣವಾಗಿ ದೂರ ಸರಿಯುವುವು. ಮನುಷ್ಯನು ತಖ್ವಭರಿತನಾಗಿ ಮುತ್ತಖಿಯಾಗುವ ತನಕ ಅವನಿಗೆ ಈ ಶರಬತ್ತಿನ ಪಾನ ಪಾತ್ರೆ ನೀಡಲ್ಪಡಲಾರದು ಮತ್ತು ಅವನ ಆರಾಧನೆ ಮತ್ತು ಪ್ರಾರ್ಥನೆಗಳು ಅಲ್ಲಾಹನಿಂದ ಅಂಗೀಕಾರ ಪಡೆಯಲಾರವು. ಏಕೆಂದರೆ ಅಲ್ಲಾಹನು ಹೇಳಿದ್ದಾನೆ, **ಇನ್ನಮಾ ಯತಖಬ್ಬಲುಲ್ಲಾಹು ಮಿನಲ್ ಮುತ್ತಖೀನ್.** ನಿಶ್ಚಯವಾಗಿಯೂ ಅಲ್ಲಾಹನು ಮುತ್ತಖಿಗಳ ಪ್ರಾರ್ಥನೆಗಳನ್ನು ಮಾತ್ರ ಅಂಗೀಕರಿಸುತ್ತಾನೆ. ಮುತ್ತಖಿಗಳ ನಮಾಝ್ ಮತ್ತು ವ್ರತಾನುಷ್ಠಾನಗಳು ಮಾತ್ರವೇ ಸ್ವೀಕೃತವಾಗುತ್ತವೆ ಎಂಬುದು ಸಹ ಸತ್ಯವಾಗಿದೆ.

ನಮಾಝ್ ಅಂಗೀಕಾರ ಪಡೆಯುವುದರ ಅರ್ಥ, ನಮಾಝ್ ಅನುಷ್ಠಿಸುವವನಲ್ಲಿ ನಮಾಝ್ ಅನುಷ್ಠಾನದ ಪ್ರಭಾವ ಮತ್ತು ಅನುಗ್ರಹಗಳು ಹುಟ್ಟಬೇಕು. ನಮಾಝ್ ಅನುಷ್ಠಾನದ ಪ್ರಭಾವಗಳು ಮತ್ತು ಅನುಗ್ರಹಗಳು ಕಾಣಿಸದಿದ್ದರೆ ಅವನ ನಮಾಝ್ ಕೇವಲ ಅಂಗವಿನ್ಯಾಸ ಮಾತ್ರವಾಗಿರುತ್ತದೆ.

ಜಮಾಅತಿನ ಹುದ್ದೇದಾರರು ವಿಶಿಷ್ಟವಾಗಿ ಒಂದು ವಿಷಯದ ಬಗ್ಗೆ ಬಹಳ ಲಕ್ಷ್ಯನೀಡಬೇಕು. ಅವರು ತಮ್ಮ ಜಮಾಅತಿನ ಮಜ್ಲಿಸ್ ಆಮಿಲದಲ್ಲಿ ಚರ್ಚಿಸುವ ವಿಷಯಗಳನ್ನು ತಮ್ಮ ಮನೆಗಳಲ್ಲಿ ಅಥವಾ ಅನಾವಶ್ಯಕವಾಗಿ ಇತರ ವ್ಯಕ್ತಿಗಳೊಂದಿಗೆ ಹೇಳಬಾರದು. ಅನೇಕ ಯುವಕರು ಹುದ್ದೇದಾರರ ಈ ವರ್ತನೆಗಳನ್ನು ನೋಡಿ ಜಮಾಅತ್‌ನಿಂದ ದೂರ ಸರಿದರು, ಮಸ್‌ಜಿದ್‌ನಿಂದ ದೂರ ಸರಿದರು, ಆರಾಧನೆಯಿಂದ ದೂರ ಸರಿದರು, ನಂತರ ಅಲ್ಲಾಹನಿಂದಲೂ ದೂರ ಸರಿದು ಹೋದರು. ಆದುದರಿಂದ ನಮ್ಮ ಮುಂದಿನ ಪೀಳಿಗೆಯನ್ನು ರಕ್ಷಿಸಲು ಹುದ್ದೇದಾರರು ಮತ್ತು ಹಿರಿಯರು ತಮ್ಮಲ್ಲಿ ತಖ್ವವನ್ನು ಮೈಗೂಡಿಸುವುದು ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೀಗೆ ಹೇಳುತ್ತಾರೆ: ನೆನಪಿಟ್ಟುಕೊಳ್ಳಿರಿ, ತಖ್ವ ಎಂದರೆ ಸ್ಥೂಲಪಾಪಗಳಿಂದ ರಕ್ಷಿಸಿಕೊಳ್ಳುವುದು ಮಾತ್ರವಲ್ಲ. ಸೂಕ್ಷ್ಮಾತಿಸೂಕ್ಷ್ಮ ಪಾಪಗಳಿಂದಲೂ ರಕ್ಷಿಸಿಕೊಳ್ಳುವುದೇ ತಖ್ವವಾಗಿದೆ. ನೀವು ಪವಿತ್ರ ಖುರ್‌ಆನನ್ನು ಪದೇ ಪದೇ ಓದಿ ಚಿಂತಿಸಿರಿ. ಏಕೆಂದರೆ ಅಲ್ಲಾಹನು ಹಾಗೆ ಮಾಡಲು ಆಜ್ಞಾಪಿಸಿದ್ದಾನೆ. ಆದುದರಿಂದ ಇದು ಬಹಳ ನೆನಪಿಡಬೇಕಾದ ವಿಷಯವಾಗಿದೆ. ತಾನು ಯಾವ ಪಾಪವನ್ನೂ ಮಾಡಲಿಲ್ಲ ಎಂಬ ಮಾತಿನಿಂದ ಸತ್ಯವಿಶ್ವಾಸಿ ಸಂತೋಷ ಪಡಲಾರ. ಅಲ್ಲಾಹನು ಹೇಳುವುದೇನೆಂದರೆ ಕೆಟ್ಟ ಕೆಲಸಗಳಿಂದ ರಕ್ಷಿಸಿಕೊಳ್ಳುವುದರ ಜೊತೆಗೆ ಒಳ್ಳೆಯ ಕೆಲಸಗಳನ್ನು ಮಾಡಬೇಕು ಎಂದಾಗಿದೆ. ಹಾಗೆ ಮಾಡದಿದ್ದರೆ ಮೋಕ್ಷ ದೊರಕಲಾರದು. ನಾನು ಯಾವ ಪಾಪವನ್ನೂ ಮಾಡಲಿಲ್ಲ ಎಂದು ಅಹಂಭಾವ ಪ್ರಕಟಿಸುವವನು ತಿಳಿಗೇಡಿಯಾಗಿದ್ದಾನೆ. ಇಸ್ಲಾಮ್ ಮನುಷ್ಯನನ್ನು ಕೇವಲ ಈ ಹದ್ದುಬಸ್ತಿನೊಳಗಿರಿಸುವುದಿಲ್ಲ. ಅದು ಎರಡು ಭಾಗಗಳನ್ನು ಇಚ್ಛಿಸುತ್ತದೆ. ಕೆಟ್ಟ ಕೆಲಸಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಮತ್ತು ಒಳ್ಳೆಯ ಕೆಲಸಗಳನ್ನು ನಿಷ್ಠೆಯಿಂದ ಮಾಡಬೇಕು. ಇವೆರಡೂ ಇಲ್ಲದಿದ್ದರೆ ಮೋಕ್ಷ ಇರಲಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಕೃತ್ಯರೂಪದಲ್ಲಿ ಸತ್ಯ ಸಂಧತೆ ಪ್ರಕಟಿಸಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆ. ಹಾಗೆ ಮಾಡಿದರೆ ಅಲ್ಲಾಹನು ನಿಮ್ಮ ಜೊತೆಗಿರುವನು. ಕಾರುಣ್ಯ, ಸದ್ಗುಣ, ಸತ್ಕಾರ್ಯ, ಸಹಾನುಭೂತಿ, ವಿನಯ ಇವುಗಳಲ್ಲಿ ಕೊರತೆ ಸಂಭವಿಸಿದರೆ ಅಂತಹ ಜಮಾಅತ್ ನಾಶವಾಗುವುದು. ಸಹಾಬರು ಪ್ರಕಟಿಸಿದ ಉದಾಹರಣೆ ಹೇಗಿತ್ತು. ಅವರು ಅಲ್ಲಾಹನ ಮಾರ್ಗದಲ್ಲಿ ಜೀವ ನೀಡಲು ಸಿದ್ಧರಾದರು. ಇಂತಹ ಸ್ಥಿತಿ ಮನುಷ್ಯನಲ್ಲಿ ಸಂಭವಿಸುವುದು ಸುಲಭವೇನೂ ಅಲ್ಲ. ಆದರೆ ಸಹಾಬರ ಚರಿತ್ರೆ ನಮಗೆ ತಿಳಿಸುವುದು ಏನೆಂದರೆ ಅವರು ತಮ್ಮ ಜೀವಾರ್ಪಣೆ ಮಾಡಲು ಸಿದ್ಧರಾದರೆಂದು. ಅವರು ತಮ್ಮ ಕಡ್ಡಾಯ ಕರ್ತವ್ಯ ಈಡೇರಿಸಿದರು. ಅಲ್ಲಾಹನ ಮಾರ್ಗದಲ್ಲಿ ಜೀವ ನೀಡಬೇಕೆಂದು ಆಜ್ಞಾಪಿಸಿದಾಗ ಅವರು ಲೋಕದ ಕಡೆಗೆ ಬಾಗಲಿಲ್ಲ. ಆದುದರಿಂದ ನೀವು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವುದು ಆವಶ್ಯಕವಾಗಿದೆ. ಸಹಾಬರ ನಡೆವಳಿಕೆ ನಮಗೆ ಅನುಕರಣೀಯ ಉತ್ತಮ ಮಾದರಿಯಾಗಿದೆ. ಯಾರು ಕೇವಲ ಲೌಕಿಕ ಲಾಭ ಗಳಿಸಲು ಇಚ್ಛಿಸುತ್ತಾರೋ ಅಂತಹ ಜನರು ಅಲ್ಲಾಹನ ದೃಷ್ಟಿಯಲ್ಲಿ ಈ ಜಮಾಅತಿಗೆ ಸೇರಿದವರಲ್ಲ. ಲೌಕಿಕ ವಿಷಯಗಳನ್ನು ಬಿಟ್ಟುಬಿಡುವವರು ಮಾತ್ರವೇ ಅಲ್ಲಾಹನ ದೃಷ್ಟಿಯಲ್ಲಿ ಈ ಜಮಾಅತಿಗೆ ಸೇರಿದವರಾಗಿರುತ್ತಾರೆ. ಚೆನ್ನಾಗಿ ನೆನಪಿಡಿರಿ, ಯಾರು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುತ್ತಾರೋ ಅವರೇ ಸತ್ಯವಿಶ್ವಾಸಿಗಳೂ ಬೈಅತ್ ಪ್ರತಿಜ್ಞೆ ಈಡೇರಿಸಿದವರೂ ಆಗಿರುತ್ತಾರೆ. ಲೌಕಿಕ ಉದ್ದೇಶಗಳಿಗೆ ಆದ್ಯತೆ ನೀಡುವವನು ಬೈಅತ್ ಪ್ರತಿಜ್ಞೆ ಮುರಿಯುವವನಾಗಿದ್ದಾನೆ ಮತ್ತು ಅಲ್ಲಾಹನ ಸನ್ನಿಧಿಯಲ್ಲಿ ಅಪರಾಧಿ ಆಗಿರುತ್ತಾನೆ. ನೆನಪಿಡಿರಿ, ಮನುಷ್ಯನ ಕರ್ಮಗಳು ಸರಿಯಾಗಿರದಿದ್ದರೆ ಅವನ ಮಾತುಗಳಿಗೆ ಯಾವ ಬೆಲೆಯೂ ಇಲ್ಲ. ಸತ್ಯವಾದ ವಿಶ್ವಾಸ ಹೃದಯದಲ್ಲಿ ಪ್ರವೇಶಿಸುತ್ತದೆ ಮತ್ತು ಅವನ ಕರ್ಮಗಳಲ್ಲಿ ಅದರ ಪ್ರಭಾವ ಪ್ರಕಟವಾಗುತ್ತದೆ. ಇಂತಹ ಸ್ಥಿತಿ ಸಹಾಬರಲ್ಲಿ ತಲೆದೋರಿತ್ತು. ಅವರ ಹೃದಯದ ಭಾವನೆಗಳು ಸ್ವಾರ್ಥ ಚಿಂತನೆಗಳಿಂದ ಸಂಪೂರ್ಣ ಮುಕ್ತವಾಗಿದ್ದುವು.

ಬೈಅತ್ ಮಾಡಿದ ನಂತರ ಒಬ್ಬ ಅಹ್ಮದಿಯ ಸ್ಥಿತಿ ಹೇಗಿರಬೇಕು ಎನ್ನುವುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಒಂದು ಕೊಂಬೆಯ ಸಂಬಂಧ ಮರದ ಕಾಂಡದೊಂದಿಗೆ ಇಲ್ಲದಿದ್ದರೆ ಅದು ಒಣಗಿ ಹೋಗುತ್ತದೆ. ಒಬ್ಬನು ಜೀವಂತ ವಿಶ್ವಾಸ ಹೊಂದಿದವನಾಗಿದ್ದರೆ ಅವನು ಲೋಕದ ಬಗ್ಗೆ ನಿರ್ಲಕ್ಷ್ಯತೆ ಹೊಂದುತ್ತಾನೆ. ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವನೇ ಅನುಗ್ರಹ ಭರಿತನಾಗುತ್ತಾನೆ. ಆದರೆ ಲೌಕಿಕ ಕಾರ್ಯಗಳಿಗೆ ಆದ್ಯತೆ ನೀಡುವವನು ಒಂದು ಶವದ ಹಾಗಿರುತ್ತಾನೆ. ಅವನು ದೇವನ ಸಹಾಯಗಳಿಸಲಾರನು. ಧಾರ್ಮಿಕ ಕಾರ್ಯಗಳಿಗೆ ಆದ್ಯತೆ ನೀಡಿ ಅದರಲ್ಲಿ ಪ್ರಗತಿ ಹೊಂದುವಾಗ ಮಾತ್ರ ಬೈಅತ್ ಪ್ರಯೋಜನಕರವಾಗುತ್ತದೆ.

ಈ ದೇಶಕ್ಕೆ ಆಗಮಿಸಿದವರೊಂದಿಗೆ ನಾನು ಹೇಳಲು ಬಯಸುತ್ತೇನೆ. ಅಲ್ಲಾಹನು ಇಲ್ಲಿ ನಿಮ್ಮ ಸ್ಥಿತಿಯನ್ನು ಉತ್ತಮಗೊಳಿಸಿದನು. ಧಾರ್ಮಿಕ ಸ್ವಾತಂತ್ರ್ಯ ನೀಡಿದನು. ನೀವು ಸ್ವಾತಂತ್ರ್ಯದೊಂದಿಗೆ ಆರಾಧನೆ ಮಾಡುವವರಾದಿರಿ. ನೀವು ನಿಮ್ಮ ಧರ್ಮವನ್ನು ಬಹಿರಂಗವಾಗಿ ಪ್ರಕಟಿಸಲು ಸಾಧ್ಯವಾಗಿದೆ. ಆದುದರಿಂದ ಇಲ್ಲಿಗೆ ಆಗಮಿಸುವ ಪ್ರತಿಯೊಬ್ಬ ಅಹ್ಮದಿ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡಲು ಪ್ರಯತ್ನಿಸುವುದು ಆವಶ್ಯಕವಾಗಿದೆ. ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಲು ನಿಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಬಳಸಿರಿ. ನಮಾಝ್‌ಗಳ ಬಗ್ಗೆ ಬಹಳ ಲಕ್ಷ್ಯ ನೀಡಬೇಕು. ಮಸ್‌ಜಿದ್

ನಿರ್ಮಿಸಿದ ನಂತರ ಅದಕ್ಕೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಈಡೇರಿಸುವುದು ಸಹ ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಮುಖ್ಯ ಉಪದೇಶ ನೀಡುತ್ತಾ ಹೀಗೆ ಹೇಳಿದರು: ಇಂದಿನ ಕಾಲಘಟ್ಟ ಬಹಳ ಕೆಟ್ಟದಾಗುತ್ತಾ ಇದೆ. ವಿವಿಧ ರೀತಿಗಳ ಶಿರ್ಕ್, ನವೀನಾಚರಣೆಗಳು ಮತ್ತು ಕೆಟ್ಟ ಕೆಲಸಗಳು ತಲೆದೋರಿವೆ. ಬೈಅತ್ ಮಾಡುವಾಗ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುತ್ತೇನೆ ಎಂದು ಮಾಡಿದ ಪ್ರತಿಜ್ಞೆ ವಾಸ್ತವಿಕವಾಗಿ ಅಲ್ಲಾಹನ ಮುಂದೆ ಮಾಡಿದ ಪ್ರತಿಜ್ಞೆಯಾಗಿದೆ. ಆದುದರಿಂದ ಮರಣದ ತನಕ ಈ ಪ್ರತಿಜ್ಞೆಯನ್ನು ಚೆನ್ನಾಗಿ ಪಾಲಿಸಬೇಕು. ಹಾಗೆ ಮಾಡುವುದಿಲ್ಲವಾದರೆ ನೀವು ಬೈಅತ್ ಮಾಡಿಲ್ಲ ಎಂದು ಮನವರಿಕೆ ಮಾಡಿರಿ. ನೀವು ಬೈಅತ್ ಪ್ರತಿಜ್ಞೆಯಲ್ಲಿ ನೆಲೆನಿಂತರೆ ಅಲ್ಲಾಹನು ನಿಮಗೆ ಧರ್ಮಕ್ಕೆ ಸಂಬಂಧಿಸಿ ಮತ್ತು ಲೌಕಿಕ ಕಾರ್ಯಗಳಿಗೆ ಸಂಬಂಧಿಸಿ ಅನುಗ್ರಹ ನೀಡುವನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಎಚ್ಚರಿಕೆ ನೀಡಿದ್ದಾರೆ. ಆದುದರಿಂದ ನಾವು ನಮ್ಮ ಸುಧಾರಣೆ ಬಗ್ಗೆ ಲಕ್ಷ್ಯ ನೀಡಬೇಕು. ಲೋಕಕ್ಕೆ ನಾವು ತಿಳಿಸಬೇಕು, ಲೋಕದಲ್ಲಿ ಸಂಭವಿಸುತ್ತಿರುವ ವಿಪತ್ತುಗಳು ಸಾಮಾನ್ಯ ವಿಪತ್ತುಗಳೇನೂ ಅಲ್ಲ. ಅವುಗಳ ಬಗ್ಗೆ ಒಂದು ನೂರು ವರ್ಷಗಳ ಹಿಂದೆ ಭವಿಷ್ಯ ನುಡಿಯಲಾಗಿದೆ. ಅವುಗಳಿಂದ ರಕ್ಷಣೆ ಪಡೆಯುವ ಒಂದೇ ಒಂದು ಮಾರ್ಗ ಮನುಷ್ಯನು ಅಲ್ಲಾಹನ ಕಡೆಗೆ ಬರುವುದಾಗಿದೆ. ಈಗ ಸಹ ಪ್ರಜ್ಞೆ ಹೊಂದದಿದ್ದರೆ ರಕ್ಷಿಸಲ್ಪಡುವುದು ಅಸಾಧ್ಯವಾಗಿದೆ. ಮನುಷ್ಯನು ತನಗೋಸ್ಕರ ಕಷ್ಟಗಳನ್ನು ಸೃಷ್ಟಿಸಿದ್ದಾನೆ. ಯುದ್ಧಗಳು ನಡೆಯುತ್ತಿವೆ. ದೌರ್ಜನ್ಯ ನಡೆಸಲಾಗುತ್ತಿದೆ. ಅಲ್ಲಾಹನು ಬಹಳ ಬಿಡುವು ನೀಡುತ್ತಿದ್ದಾನೆ. ಆದರೆ ದೌರ್ಜನ್ಯಗಳು ಅಲ್ಲಾಹನ ದೃಷ್ಟಿಯಲ್ಲಿ ಅತಿ ಉನ್ನತ ಶೃಂಗವನ್ನು ತಲಪಿದರೆ ದೌರ್ಜನ್ಯ ಮಾಡುವ ಸಮುದಾಯಗಳು ನಾಶಗೊಳಿಸಲ್ಪಡುವುವು. ಆಗ ರಕ್ಷಿಸಲ್ಪಡುವ ಜನರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಪದ್ಯದಲ್ಲಿ ಹೀಗೆ ವಿವರಿಸಿದ್ದಾರೆ: **ಆಗ್ ಹೈ ಪರ್ ಆಗ್‌ಸೆ ಓ ಸಬ್ ಬಚಾಯೆ ಜಾಯೇಂಗೆ ಜೊ ಕೆ ರಖ್‌ತೇ ಹ್ಯೆಂ ಖುದಾಯೆ ಝುಲ್ ಅಜಾಯಿಬ್ ಸೆ ಪ್ಯಾರ್.** ಅಗ್ನಿ ಇದೆ. ಆದರೆ ಸರ್ವಶಕ್ತನಾದ ಅಲ್ಲಾಹನನ್ನು ಪ್ರೀತಿಸುವವರು ರಕ್ಷಿಸಲ್ಪಡುವರು.

ಈ ವಿಷಯದ ಬಗ್ಗೆ ಲಕ್ಷ್ಯ ನೀಡಿರಿ. ತಮ್ಮನ್ನು ರಕ್ಷಿಸಲು ಮತ್ತು ಲೋಕವನ್ನು ರಕ್ಷಿಸಲು ನಾವು ಬಹಳ ಪ್ರಯತ್ನ ಮಾಡಬೇಕು. ಅದಕ್ಕೋಸ್ಕರ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಬಳಸಬೇಕು. ಮತ್ತು ಅಲ್ಲಾಹನ ಸಾಮೀಪ್ಯ ಗಳಿಸಲು ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ಜಮಾಅತ್ ಸ್ಥಾಪಿಸಿರುವುದು ಮನುಷ್ಯನು ಅಲ್ಲಾಹನ ಸಾಮೀಪ್ಯ ಗಳಿಸಲಿಕ್ಕೋಸ್ಕರವಾಗಿದೆ. ಅಲ್ಲಾಹನ ಸಾಮೀಪ್ಯ ಗಳಿಸುವುದು ಬಹಳ ಕಷ್ಟಕರವಾಗಿದೆ. ಅದೊಂದು ರೀತಿಯ ಮರಣವಾಗಿದೆ. ಆದರೆ ಕೊನೆಗೆ ಜೀವ ಗಳಿಸುವುದು ಅದರಿಂದಲೇ ಆಗಿದೆ. ತನ್ನಿಂದ ಶೈತಾನನನ್ನು ಹೊರಗೆ ಹಾಕುವವನು ಅನುಗ್ರಹ ಗಳಿಸಿದವನಾಗಿದ್ದಾನೆ. ಅವನ ಮನೆಗೆ ಅವನ ಶರೀರಕ್ಕೆ ಮತ್ತು ನಗರಕ್ಕೆ ಅದರ ಅನುಗ್ರಹ ತಲಪುತ್ತದೆ.

ನಾವು ಬೈಅತ್ ಪ್ರತಿಜ್ಞೆ ಈಡೇರಿಸುವವರೂ ನಮ್ಮೊಳಗೆ ಪರಿಶುದ್ಧ ಬದಲಾವಣೆ ಉಂಟುಮಾಡುವವರೂ ಆಗಲು ಅಲ್ಲಾಹನು ಭಾಗ್ಯ ನೀಡಲಿ. ನಾವು ಧಾರ್ಮಿಕ ಕಾರ್ಯಗಳಿಗೆ ಆದ್ಯತೆ ನೀಡುವವರಾಗೋಣ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ನೀಡಿದ ವಾಗ್ದಾನಗಳ ವಾರೀಸುದಾರರಾಗುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್.

——————*****——————


***Friday Sermon delivered by Hadrath Khaleefatul Masih Al Khamis*** *(atba)*

*At,Baithul Samee Mosque in Houston,Texas USA On 26-10-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***:*khutuba.kannada@gmail.com*

**You can find all the Sermons archived at**: www.alislam.org/friday-sermon